ನಿಮ್ಮೊಳಗಿದ್ದ ಬಂಡಾಯಗಾರ ಕಾರ್ಯಶೀಲವಾಗಿದ್ದು ಅಲ್ಲಿಂದಲೇ.

ಈಗ ಅದನ್ನೆಲ್ಲ ನೆನಪಿಸಿಕೊಂಡರೆ ಏನೇನೆಲ್ಲ ಸಾಹಸ ಮಾಡ್ತಿದ್ನಪ್ಪ ಅನ್ನಿಸುತ್ತೆ. ನಮ್ಮೂರಿನ ಹತ್ತಿರ ಅರೆಗೊಂಡನಹಳ್ಳಿ ಅಂತ ಒಂದೂರು. ಅಲ್ಲಿ ಒಬ್ಬರಿಗೆ ದೇವರು ಮೈಮೇಲೆ ಬರೋದು. ಅಲ್ಲಿಗೆ ಬಹಳ ಜನ ಹೆಣ್ಣುಮಕ್ಕಳು ಕರ್ನಾಟಕದ ಬೇರೆ ಬೇರೆ ಭಾಗಗಳಿಂದಲೂ ಬರೋರು. ದೇವರು ಬರೋ ಮನುಷ್ಯ ಬೆತ್ತ ಮುಟ್ಟಿದ ಕೂಡಲೇ ಹೆಂಗಸರು ಕುಣಿಯೋಕೆ ಶುರು ಮಾಡ್ತಾ ಇದ್ರು. ಎಲ್ರೂ ಇದನ್ನ ಪವಾಡ ಅಂತ ಕರೀತಾ ಇದ್ರು. ನನಗೆ ಇದು ಯಾಕೋ ವಿಚಿತ್ರ ಅನ್ನಿಸೋಕೆ ಶುರುವಾಯ್ತು. ಆಮೇಲೆ ಸ್ವಲ್ಪ ಪತ್ತೆದಾರಿ ಮಾಡಿದ ಮೇಲೆ ಗೊತ್ತಾಯ್ತು, ಒಬ್ಬ ಹೆಣ್ಣುಮಕ್ಕಳನ್ನ ಅಲ್ಲಿಗೆ ಕರೆದುಕೊಂಡು ಬರೋ ವ್ಯವಸ್ಥೆ ಇತ್ತು ಅಂತ. ನಾನು ನಮ್ಮೂರಿನವರ ಜೊತೆ ಹೋಗದೆ ನಿಟ್ಟೂರಿನಿಂದ ಹೋಗೋ ಜನರ ಜೊತೆ ಹೋಗಿದ್ದೆ. ಆಗಲೇ ಇದೆಲ್ಲ ನನಗೆ ಗೊತ್ತಾಗಿದ್ದು.

ಇನ್ನೊಂದೆರಡು ಕುತೂಹಲಕರವಾದ ಘಟನೆಗಳು ನೆನಪಿಗೆ ಬರ್ತಾ ಇವೆ. ಅಲ್ಲೊಂದು ಜಾತ್ರೆಯಲ್ಲಿ ಕುರಿ ಬಲಿ ಕೊಡ್ತಾ ಇದ್ರು. ನಾನು ಒಂದು ಸಲ ಅಲ್ಲಿ ಬಲಿ ಕೊಡೋಕೆ ಅಂತ ಸಿದ್ಧ ಮಾಡಿಟ್ಟಿದ್ದ ಕುರೀನ ಹೋಗಿ ಹಿಡ್ಕೊಂಡು ಬಿಟ್ಟೆ. ಅಂತೂ ಆ ಕುರೀನ ಬಲಿ ಕೊಡೋದನ್ನ ನಾನು ನಿಲ್ಲಿಸಿದೆ. ಅದನ್ನ ಗಾವು ಸಿಗಿಯೋದು ಅಂತಾರೆ. ಹಾಗೇನೆ ಇನ್ನೊಂದು ಕಡೆ ಕೋಣ ಬಲಿ ಕೊಡೋಕೆ ಎಲ್ಲ ತಯಾರಿ ಮಾಡಿಟ್ಟುಕೊಂಡಿದ್ರು. ನಾನು ಹೋದೋನೆ ಆ ಕೋಣದ ಕುತ್ತಿಗೆ ಹಿಡಿದುಕೊಂಡು ಬಿಟ್ಟೆ. ಅಷ್ಟೇ ಅಲ್ಲ, ಪೊಲೀಸ್‌ನವನನ್ನ ಕರೆಸಿ ಆ ಕೋಣವನ್ನ ಹರಾಜಿಗೆ ಹಾಕಿಸಿದೆ. ಆವಾಗೆಲ್ಲ ನನಗೇನು 15–16 ವರ್ಷ ಇರಬಹುದು.

ಹೆಚ್ಚೂ ಕಡಿಮೆ ಇದೇ ಸಂದರ್ಭದಲ್ಲಿ ನಮ್ಮೂರಿನಲ್ಲಿ ನಾವು ಕೆಲವರು ನಮ್ಮ ಅಧ್ಯಾಪಕರು ಸಂಜೀವಯ್ಯನವರ ಮಾರ್ಗದರ್ಶನದಲ್ಲಿ 'ಮಿತ್ರ ಸಂಘ' ಅಂತ ಶುರು ಮಾಡಿಕೊಂಡ್ವಿ. ಆ ಅಧ್ಯಾಪಕರು ಬಹಳ ಆದರ್ಶವಾದಿಗಳು. ಅವರಿಗೆ ಗಾಂಧಿ ಮತ್ತು ಶಿವರಾಮ ಕಾರಂತರು ಮಾದರಿಯಾಗಿದ್ರು. ಈ ಸಂಘದ ಮೂಲಕ ನಾವು ಊರಿನ ಮಕ್ಕಳಿಗೆ ಪಾಠ ಹೇಳಿಕೊಡೋದು, ಚರಂಡಿ ಸ್ವಚ್ಛ ಮಾಡೋದು ಇಂಥ ಕೆಲಸಗಳನ್ನ ಮಾಡ್ತಾ ಇದ್ವಿ. ಇದಕ್ಕೆಲ್ಲಾ ನಮ್ಮ ಮನೇನೆ ಹೆಡ್ ಕ್ವಾರ್ಟರ್ಸ್ ಆಗಿತ್ತು. ನಮ್ಮಮ್ಮ, ಅಜ್ಜಿ ಇದಕ್ಕೆಲ್ಲ ಬೆಂಬಲ ಕೊಡ್ತಾ ಇದ್ರು.

◆ **ನೀವು ಇಂಟರ್ ಮೀಡಿಯೆಟ್ ಮಾಡಿದ್ದು ತುಮಕೂರಿನಲ್ಲಿ. ಸಿದ್ಧಗಂಗಾ ಮಠದ ವಾತಾವರಣ, ಸ್ವಾಮಿಗಳ ಜೊತೆ ನಿಮ್ಮ ಒಡನಾಟ ಹೇಗಿತ್ತು?**

ನೋಡಿ, ಆ ಕಾಲದಲ್ಲಿ ಸ್ವಾಮಿಗಳು ನಿಜಕ್ಕೂ ಬಹಳ ಕಷ್ಟಪಟ್ಟು ವಿದ್ಯಾರ್ಥಿಗಳನ್ನು ಸಾಕ್ತಾ ಇದ್ರು. ಸ್ವತಃ ಅವರೇ ನಮಗೆ ಸಿಮೆಂಟು, ಇಟ್ಟಿಗೆ ಹೊರಿಸಿದ್ದು ನನಗೆ ನೆನಪಿದೆ. ನಮ್ಮ ಜೊತೇಲಿ ನೀರು ಸೇದ್ತಾ ಇದ್ರು. ಒಂದು ರೀತೀಲಿ ಅವರೇ ನಮಗೆ ಸ್ಫೂರ್ತಿಯೂ ಆಗಿದ್ರು. ಹೊಲಗಳಿಗೆ ನಮ್ಮನ್ನೂ ಕರೆದುಕೊಂಡು ಹೋಗ್ತಾ ಇದ್ರು. ರೈತರು ಕೊಡ್ತಾ ಇದ್ದದ್ದನ್ನ ನಾವು ಮಠಕ್ಕೆ ತರ್ತಾ ಇದ್ವಿ.

◆ **ನೀವು ಆನರ್ಸ್‌ಗೆ ಹೋಗಿದ್ದೂ ಒಂದು ರೋಚಕ ಕಥೇನೇ. ಎಲ್ಲರ ಜೀವನದಲ್ಲೂ ರೋಚಕವಾದ ಘಟನೆಗಳು ಇದ್ದೇ ಇರ್ತಾವೆ. ಆದರೆ ನಿಮ್ಮ ಜೀವನದಲ್ಲಿ ಅವುಗಳ ಸರಮಾಲೆಯೇ ಇದೆ.**

(ನಗು) ಏನ್ ಮಾಡ್ತೀರಾ... ನಾನು ಆನರ್ಸ್‌ಗೆ ಮೈಸೂರಿಗೆ ಹೋಗಬೇಕು ಅಂತ ಯೋಚನೆ ಮಾಡಿ ಶಿವಕುಮಾರ ಸ್ವಾಮಿಗಳನ್ನ ನನಗೆ ಫೀಸಿಗೆ ಹಣ ಕೊಡೋಕಾಗುತ್ತಾ ಅಂತ ಕೇಳಿದೆ. ಅವರು, 'ಎಲ್ಲರೂ ಸಹಾಯ ಪಡ್ಕೋತಾರೆ, ಆಮೇಲೆ ಏನೂ ಮಾಡೋಲ್ಲ. ಎಷ್ಟು ಜನಕ್ಕೆ ಅಂತ ಮಾಡೋದು, ಆಗೋಲ್ಲ' ಅಂದುಬಿಟ್ಟರು. ಇನ್ನೇನು ಮಾಡೋದು, ಇಲ್ಲಿಗೆ ಓದು ನಿಲ್ಲಿಸಿಬಿಡೋದು